## ಪ್ರಾರ್ಥನೆ

# ಶ್ರೀಲಕ್ಷ್ಮೀ ಸ್ತುತಿ



ಹಿರಣ್ಮಯೀಂ ಲಕ್ಷ್ಮೀಂ ಸದಾ ಭಜಾಮಿ
ಹೀನ ಮಾನವಾಶ್ರಯಂ ತ್ಯಜಾಮಿ ॥ ಪಲ್ಲವಿ ॥

ಚಿರತರ ಸಂಪತ್ಪ್ರದಾಂ ಕ್ಷೀರಾಂಬುಧಿ ತನಯಾಂ
ಹರಿವಕ್ಷಸ್ಥಲಾಲಯಾಂ ಹರಿಣೀಂ ಚರಣ ಕಿಸಲಯಾಂ
ಕರಕಮಲ ಧೃತ ಕುವಲಯಾಂ
ಮರಕತ ಮಣಿಮಯ ವಲಯಾಮ್ ॥ ಅನುಪಲ್ಲವಿ ॥

ಶ್ವೇತದ್ವೀಪ ವಾಸಿನೀಂ ಶ್ರೀ ಕಮಲಾಂಬಿಕಾಂ ಪರಾಂ
ಭೂತ ಭವ್ಯ ವಿಲಾಸಿನೀಂ ಭೂಸುರ ಪೂಜಿತಾಂ ವರಾಂ
ಮಾತರಮಬ್ಜ ಮಾಲಿನೀಂ ಮಾಣಿಕ್ಯಾಭರಣಧರಾಂ
ಗೀತವಾದ್ಯ ವಿನೋದಿನೀಂ ಗಿರಿಜಾಂ ತಾಂ ಇಂದಿರಾಂ
ಶೀತಕಿರಣ ನಿಭ ವದನಾಂ ಶ್ರಿತ ಚಿಂತಾಮಣಿ ಸದನಾಂ
ಪೀತವಸನಾಂ ಗುರುಗುಹ
ಮಾತುಲ ಕಾಂತಾಂ ಲಲಿತಾಮ್ ॥

ಹಿರಣ್ಮಯಿಯಾದ ಲಕ್ಷ್ಮಿಯನ್ನೇ ನಾನು ಸದಾ ಭಜಿಸುತ್ತೇನೆ, ಹೀನ ಮಾನವನ ಆಶ್ರಯವನ್ನು ತ್ಯಜಿಸುತ್ತೇನೆ. ಅವಿನಾಶಿಯಾದ ಸಂಪತ್ತನ್ನು ನೀಡುವ, ಕ್ಷೀರಸಾಗರದ ತನಯೆಯಾದ, ಶ್ರೀವಿಷ್ಣುವಿನ ವಕ್ಷಸ್ಥಳದಲ್ಲಿ ನೆಲೆಸಿರುವ, ಚಿನ್ನದಂತೆ ಶುಭ್ರ ಕಾಂತಿಯಿಂದ ಕೂಡಿರುವ, ಚಿಗುರಿನಂತಹ ಪಾದಗಳುಳ್ಳ, ಕೈಗಳಲ್ಲಿ ಕನ್ನೈದಿಲೆಯನ್ನು ಹಿಡಿದಿರುವ, ಮರಕತ ಮಣಿಯಿಂದ ಕೂಡಿದ ಬಳೆಗಳನ್ನು ಧರಿಸಿರುವ ಆ ಲಕ್ಷ್ಮಿಯನ್ನೇ ನಾನು ಭಜಿಸುತ್ತೇನೆ.

ಆಕೆ ಶ್ವೇತದ್ವೀಪವಾಸಿನಿ ಹಾಗೂ ಪರಾಶಕ್ತಿಯಾದ ಕಮಲಾಂಬಿಕೆಯೇ ಆಗಿರುವಳು. ಅವಳು ಭೂತ, ಭವಿಷ್ಯತ್ತುಗಳಲ್ಲಿ ವಿರಾಜಿಸುವವಳು. ಅವಳು ಶ್ರೇಷ್ಠ ಜನರಿಂದ ಪೂಜಿಸಲ್ಪಡುವವಳೂ, ತಾವರೆ ಹೂಗಳ ಮಾಲೆಯನ್ನೂ ಧರಿಸಿರುವವಳೂ, ಮಾಣಿಕ್ಯಗಳಿಂದ ಕೂಡಿದ ಆಭರಣಗಳನ್ನು ಧರಿಸಿದವಳೂ ಆಗಿದ್ದಾಳೆ. ಗೀತೆ, ವಾದ್ಯಗಳಿಂದ ಕೂಡಿದ ಸಂಗೀತವನ್ನು ಕೇಳಿ ಆಕೆ ಆನಂದಪಡುತ್ತಾಳೆ. ಗಿರಿಜೆಯೇ ಆಗಿರುವ ಆಕೆ ಇಂದಿರೆ. ಚಂದ್ರನಂತಹ ಮುಖದಿಂದ ಕೂಡಿದವಳೂ, ತನ್ನನ್ನು ಆಶ್ರಯಿಸಿದವರಿಗೆ ಚಿಂತಾಮಣಿಯೇ ಆಗಿರುವವಳೂ, ಪೀತಾಂಬರವನ್ನು ಧರಿಸಿರುವವಳೂ ಆಗಿರುವಳು. ಗುರುಗುಹನ ಮಾವನಾದ ವಿಷ್ಣುವಿನ ಪತ್ನಿಯಾದ, ಲಲಿತೆಯೂ ಆಗಿರುವ ಶ್ರೀ ಲಕ್ಷ್ಮಿಯನ್ನೇ ಸದಾ ನಾನು ಭಜಿಸುತ್ತೇನೆ.

— ಮುತ್ತುಸ್ವಾಮಿ ದೀಕ್ಷಿತರು

## ಸೂಕ್ತಿಪ್ರಭ

**ಕ**ಲಿಕೆ ಎಂದಿಗೂ ಮನಸ್ಸನ್ನು ಆಯಾಸಗೊಳಿಸುವುದಿಲ್ಲ.

*— ಲಿಯೊನಾರ್ಡೊ ಡಾ ವಿಂಚಿ*

**ಸಾ**ವಿರ ಮೈಲಿ ದೂರದ ಪ್ರಯಾಣ ಆರಂಭವಾಗುವುದು ಒಂದೇ ಒಂದು ಹೆಜ್ಜೆಯಿಂದ.

*— ಲಾವೋ ತ್ಸು*

**ದೇ**ವರು ನಮಗೆ ಈ ಜನ್ಮವೆಂಬ ಕಾಣಿಕೆಯನ್ನು ಕೊಟ್ಟಿದ್ದಾನೆ. ಚೆನ್ನಾಗಿ ಬದುಕುವುದು ಎಂಬ ಕಾಣಿಕೆ ನಮ್ಮ ಕೈಯಲ್ಲಿದೆ.

*— ವಾಲ್ಟೇರ್*

**ಸ**ತ್ಯದ ಕಾಂತಿ ಎಂತಹದೆಂದರೆ, ಯಾರು ಅದನ್ನು ನೋಡುವರೋ ಅವರಿಗೆ ಅದು ಸತ್ಯ ಎಂದು ಸ್ಪಷ್ಟವಾಗಿ ಗೊತ್ತಾಗುವುದು. ಸೂರ್ಯನನ್ನು ನೋಡಬೇಕಾದರೆ ಯಾವ ದೀವಟಿಗೆಯೂ ಬೇಕಾಗಿಲ್ಲ. ಸೂರ್ಯ ಸ್ವಯಂ ಪ್ರಕಾಶಮಾನ. ಸತ್ಯಕ್ಕೆ ಯಾವುದಾದರೂ ಒಂದು ಪ್ರಮಾಣ ಬೇಕಾದರೆ, ಆ ಪ್ರಮಾಣಕ್ಕೆ ಪ್ರಮಾಣ ಯಾವುದು? ಸತ್ಯಕ್ಕೆ ಸಾಕ್ಷಿ ಬೇಕಾದರೆ, ಆ ಸಾಕ್ಷಿಗೆ ಸಾಕ್ಷಿ ಯಾರು?

*— ಸ್ವಾಮಿ ವಿವೇಕಾನಂದ*

**ನಾ**ವು ಏನಾಗಿದ್ದೇವೋ ಅದನ್ನು ನಾವು ತಿಳಿಯಬಲ್ಲೆವು; ನಾವು ಏನಾಗಬಲ್ಲೆವು – ಅದನ್ನು ನಾವು ತಿಳಿಯಲಾರೆವು.

*— ವಿಲಿಯಂ ಷೇಕ್ಸ್‌ಪಿಯರ್*

**ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।**
**ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥**

**ಕು**ಲದ ಹಿತಕ್ಕಾಗಿ ಒಬ್ಬನನ್ನು ತ್ಯಾಗ ಮಾಡಬೇಕು. ಗ್ರಾಮದ ಹಿತಕ್ಕಾಗಿ ಕುಲವನ್ನೂ, ದೇಶದ ಹಿತಕ್ಕಾಗಿ ಗ್ರಾಮವನ್ನೂ, ಆತ್ಮನ ಹಿತಕ್ಕಾಗಿ ಪೃಥ್ವಿಯನ್ನೂ ತ್ಯಾಗ ಮಾಡಬೇಕು.

*— ಹಿತೋಪದೇಶ*